ಕುರಿತು ಮತ್ತು ಮಾನವೀಯತೆಗೆ ಶರಣಾಗುವ ಸೌಂದರ್ಯದ ಕುರಿತು... ಹೀಗೆ ಸೂಫಿ ತತ್ತ್ವವನ್ನು ಆಧರಿಸಿದ ಸಂಗೀತಕ್ಕೆ ಕಥಕ್ ನೃತ್ಯವನ್ನು ಅಳವಡಿಸಿ ಪ್ರಸ್ತುತಪಡಿಸುವ ಹೊಸ ಮಾದರಿಯನ್ನು ನಾನು ಕಂಡುಕೊಂಡೆ.

◆ **ನಿಮ್ಮ ಮೊದಲ ಪ್ರಯತ್ನ ಮತ್ತು ಅದಕ್ಕಾಗಿ ನೀವು ನಡೆಸಿದ ತಯಾರಿಗಳ ಬಗ್ಗೆ ವಿವರಿಸಬಹುದೇ?**

1997ರಲ್ಲಿ ಲಖನೌದ ಕೊನೆಯ ರಾಜನರ್ತಕಿ (ತವಾಯಫ್) ಎಂದು ಗುರುತಿಸಿಕೊಂಡ ಝರೀನಾ ಬೇಗಂ ಅವರನ್ನು ಭೇಟಿಯಾದೆ. ಅವರಿಂದ ಪಡೆದ ಜ್ಞಾನವನ್ನು ಆಧರಿಸಿ ನೃತ್ಯ ರೂಪಕವನ್ನು ದೆಹಲಿಯಲ್ಲಿ ಪ್ರಸ್ತುತಪಡಿಸಿದೆ. ಇಂದು ಕಥಕ್ ನೃತ್ಯಪ್ರಕಾರವು ನಮ್ಮ ತಲೆಮಾರಿಗೆ ದಾಟಿ ಬಂದಿದೆ ಎಂದರೆ ಅದಕ್ಕೆ ರಾಜನರ್ತಕಿಯರ ಕೊಡುಗೆ ಅಗಾಧವಾಗಿದೆ. ಆದರೆ ಅದನ್ನು ಗುರುತಿಸಲು ನಾವು ಹಿಂದೇಟು ಹಾಕುತ್ತಿದ್ದೇವೆ ಎನ್ನುವುದೇ ನಾಚಿಕೆಯ ವಿಷಯವಾಗಿದೆ. ಅವರ ಕೊಡುಗೆಯ ಬಗ್ಗೆ ಒಂದು ನೃತ್ಯ ಪ್ರಸ್ತುತಿಯನ್ನೂ ಸ್ವೀಕರಿಸಲಾರದ ಸಮಾಜ ನಮ್ಮದಾಗಿದೆ ಎಂದು ಬೇಸರವೆನಿಸಿತು. ನಾನು ಅದಾಗಲೇ ವಿವಿಧ ದೇಶಗಳಲ್ಲಿ ನೃತ್ಯ ಪ್ರದರ್ಶನ ನೀಡಿ ಬಂದಿದ್ದರೂ, ರಾಜನರ್ತಕಿಯರ ಕುರಿತು ನಾನು ನೃತ್ಯ ರೂಪಕ ಮಾಡುತ್ತೇನೆ ಎಂದ ಕೂಡಲೇ ಎಷ್ಟೊಂದು ಟೀಕೆಗಳು ವ್ಯಕ್ತವಾದವು. ಯದ್ವಾತದ್ವಾ ಟೀಕೆಗಳನ್ನು ಗಮನಿಸಿ ನನ್ನ ಆಪ್ತರೇ, 'ಇದೆಲ್ಲ ಬೇಕಾ ಮಂಜರೀ, ಬಿಟ್ಟು ಬಿಡು, ಬೇರೇನಾದರೂ ಮಾಡು' ಎಂದು ಹಿತವಚನ ಹೇಳಿದ್ದುಂಟು. ಆಗೆಲ್ಲ ನಾನು ಇದೇ ಪ್ರೊಜೆಕ್ಟ್ ಅನ್ನು ಮಾಡಬೇಕು ಎಂದು ನನ್ನ ಹಟವನ್ನು ಗಟ್ಟಿಮಾಡಿಕೊಂಡೆ. ನೂರಾರು ವರ್ಷಗಳಿಂದ ತಮ್ಮ ಕಾಯಕವನ್ನು ಮಾಡಿಕೊಂಡು ಬಂದ ಕಲಾವಿದೆಯರ ಬಗ್ಗೆ ಅಂದೂ ಮಾತನಾಡಲು ಸಿದ್ಧರಿರಲಿಲ್ಲ. ಇತಿಹಾಸದಲ್ಲಿ ಅವರ ಕೊಡುಗೆಗಳನ್ನು ದಾಖಲಿಸಲಿಲ್ಲ. ಇದೀಗ ನಾನಾದರೂ ಅವರ ಬಗ್ಗೆ ಮಾತನಾಡದೇ ಇನ್ನಾರು ಮಾತನಾಡುತ್ತಾರೆ? ಆದ್ದರಿಂದ ಈ ಪ್ರೊಜೆಕ್ಟ್ ನಾನು ಮಾಡಲೇಬೇಕು ಎಂದು ದೃಢನಿರ್ಧಾರ ಮಾಡಿದೆ.

2006ರಲ್ಲಿ ನಾನು ಮಹಿಳಾ ಕಲಾವಿದರ ಬಗ್ಗೆ ಮೊತ್ತ ಮೊದಲ ಪ್ರದರ್ಶನ, 'ದ ತವಾಯಫ್' ಅನ್ನು ಪ್ರಸ್ತುತಪಡಿಸಿದೆ. ಇದು ದೇಶ ವಿದೇಶದಲ್ಲಿ ಬಹಳ ಪ್ರಸಿದ್ಧಿ ಪಡೆಯಿತು. ಜನರು ನನ್ನನ್ನು ಸೂಫಿ ಕಥಕ್ ಸ್ಪಿರಿಚ್ಯುವಲ್ ಡಾನ್ಸರ್ ಎಂದು ಕರೆಯಲಾರಂಭಿಸಿದರು.

◆ **ಹಾಗಾದರೆ ಕಲಾಪ್ರಕಾರಗಳಲ್ಲಿ ಯಶಸ್ಸು ಅಪಯಶಸ್ಸುಗಳು ಗಂಡು ಮತ್ತು ಹೆಣ್ಣಿಗೆ ಬೇರೆ ಬೇರೆಯಾಗಿರುತ್ತದೆಯೇ? ನಿಮ್ಮ ಮಾತುಗಳನ್ನು ಕೇಳಿದರೆ ಮಹಿಳೆಯರು ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಹಿನ್ನೆಲೆಯಲ್ಲಿ ಬೇರೇನೋ ಅಂಶಗಳು ಅಡಗಿವೆ ಅನಿಸುತ್ತದೆ?**

ಹಾಗೆ ಜನರಲೈಸ್ ಆಗಿ ಹೇಳಲು ಬರುವುದಿಲ್ಲ. ನನ್ನ ಪ್ರಕಾರ, ಕಲೆಯನ್ನು ಲಿಂಗಾಧಾರಿತವಾಗಿ ಮೌಲ್ಯಮಾಪನ ಮಾಡುವುದು ಸರಿಯಲ್ಲ. ಕಲೆಯನ್ನು ಅದರ ಮೌಲ್ಯವನ್ನಾಧರಿಸಿಯೇ ವಿಮರ್ಶಿಸಬೇಕು. ಆದರೆ ದುರದೃಷ್ಟವಶಾತ್ ಲಿಂಗತ್ವವು ಒಂದು ಮುಖ್ಯ ಮಾನದಂಡ ಆಗಿಬಿಟ್ಟಿದೆ. ಸಮಾಜವು ಎಷ್ಟೊಂದು ಪಿತೃಪ್ರಧಾನವಾಗಿ ಆಲೋಚನೆ ಮಾಡುತ್ತಿದೆ ಎಂದರೆ, ಒಂದು ನೃತ್ಯ ಪ್ರಕಾರವನ್ನು ಉಳಿಸಿಕೊಂಡು ಬಂದಿರುವ ಕಲಾವಿದೆಯರನ್ನು ಗೌರವಿಸಲೂ ಹಿಂದೇಟು ಹಾಕುತ್ತದೆ. ಅವರಿಗೆ ಕಳಂಕದ ಪಟ್ಟವನ್ನು ಹೊರಿಸಿ ಇತಿಹಾಸದಲ್ಲಿ ಅವರ ಕೊಡುಗೆ ದಾಖಲಾಗದಂತೆ ಮಾಡಲಾಗಿದೆ. ಇಂದಿನ ಕಾಲದಲ್ಲಿ ನಾವು ಕಲಾವಿದರು ಯಾವುದೇ ವೇದಿಕೆಯಲ್ಲಿ ನೃತ್ಯ ಮಾಡುವಷ್ಟು ಸೌಕರ್ಯವನ್ನು ಹೊಂದಿದ್ದೇವೆ. ಆದರೆ 200 ವರ್ಷಗಳ ಹಿಂದೆ ಕಥಕ್ ನೃತ್ಯದ ಪೋಷಣೆಗೆ ರಾಜಾಶ್ರಯ ಬೇಕಾಗಿತ್ತು. ರಾಜರ ಆಸ್ಥಾನದಲ್ಲಿದ್ದ ಕಲಾವಿದೆಯರು ಈ ನೃತ್ಯಪ್ರಕಾರವನ್ನು ಪೋಷಿಸುತ್ತ ಬಂದರು. ಅವರ ಕೊಡುಗೆಯನ್ನು ಗಮನಿಸಬೇಕು ಎಂಬ ಉದ್ದೇಶದಿಂದ ನಾನು ನನ್ನ ಸಂಶೋಧನಾ ಕಾರ್ಯವನ್ನು ಕೈಗೆತ್ತಿಕೊಂಡೆ. ಕಥಕ್‌ನ ಪೋಷಕ ರಾಜನಾಗಿದ್ದ ಅವಧ ರಾಜ್ಯದ ಕೊನೆಯ ನವಾಬ ವಜೀದ್ ಅಲಿ ಶಾ ಕುರಿತಾದ ಪುಸ್ತಕ ಮತ್ತು ದಾಖಲೆಪತ್ರಗಳಲ್ಲಿ ಏನಿದೆ ಎಂದು ವಿಷಯ ಸಂಗ್ರಹಿಸಿದೆ. ವಜೀದ್ ಅಲಿ ಶಾ ಸ್ವತಃ ಅನೇಕ ನೃತ್ಯ ನಾಟಕಗಳನ್ನು ಬರೆದ ಕಲಾಪೋಷಕನಾಗಿದ್ದ. ಹೀಗೆ ಹಬ್ಬಿಕೊಂಡ ಅಧ್ಯಯನವು ನನ್ನ ನೃತ್ಯವನ್ನು ಪ್ರಭಾವಿಸಿತು. ಸೂಫಿ ಕಥಕ್ ಅರಳುವುದಕ್ಕೆ ಇಂತಹ